ಕರ್ನಾಟಕ ಸರ್ಕಾರ

**ನವೆಂಬರ್ 22, 2016**

## ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕದ ದಿಗ್ಗಜ
## ಡಾ ಎಂ. ಬಾಲ ಮುರಳಿ ಕೃಷ್ಣ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

**ಬೆಳಗಾವಿ, ನವೆಂಬರ್ 22 :**

ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕದ ದಿಗ್ಗಜ ಡಾ ಎಂ. ಬಾಲ ಮುರಳಿ ಕೃಷ್ಣ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಡಾ ಮಂಗಲಂಪಲ್ಲಿ ಬಾಲ ಮುರಳಿ ಕೃಷ್ಣ ಅವರು ಭಾರತ ಕಂಡ ಅತ್ಯದ್ಭುತ ಪ್ರತಿಭೆ. ಗಾಯನ ಲೋಕದಲ್ಲಿ ಸರಿ ಸುಮಾರು ಎಂಟು ದಶಕಗಳ ಸುದೀರ್ಘ ಪಯಣದಲ್ಲಿ ಜಗತ್ತಿನ ಮೂಲೆ ಮೂಲೆಗಳಲ್ಲೂ 25,000 ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿ ತಮ್ಮ ಮಾದಕ ಧ್ವನಿಯಿಂದ ಇಡೀ ವಿಶ್ವವನ್ನೇ ತಮ್ಮತ್ತ ಸೆಳೆದ ಕೀರ್ತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದ ಡಾ ಬಾಲ ಮುರಳಿ ಕೃಷ್ಣ ಅವರು 72 ಮೇಳ ರಾಗಗಳನ್ನೂ ಸಂಪೂರ್ಣವಾಗಿ ಅರಿತಿದ್ದ ಪ್ರತಿಭಾ ಸೂರ್ಯ ! ತಮ್ಮ ಮಾತೃ ಭಾಷೆ ತೆಲುಗು ಆಗಿದ್ದರೂ ಕನ್ನಡ, ಸಂಸ್ಕೃತ ಹಾಗೂ ತಮಿಳು ಭಾಷೆಯೂ ಒಂಗೊಂಡಂತೆ ನಾಲ್ಕೂ ಭಾಷೆಗಳಲ್ಲಿ 400 ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿರುವುದು ಡಾ ಬಾಲ ಮುರಳಿ ಕೃಷ್ಣ ಅವರ ಪ್ರಖರ ಪಾಂಡಿತ್ಯಕ್ಕೆ ಹಾಗೂ ಪ್ರತಿಭೆಯ ಪ್ರಭೆಗೆ ಸಾಕ್ಷಿ.

ಹೊಸ ರಾಗಗಳ ಅನ್ವೇಷಣೆಯಲ್ಲೂ ಮುಂಚೂಣಿಯಲ್ಲಿದ್ದ ಡಾ ಬಾಲ ಮುರಳಿ ಕೃಷ್ಣ ಅವರು ಪದ್ಮ ಶ್ರೇಣಿಯ ಪದ್ಮಶ್ರೀ, ಪದ್ಮ ಭೂಷಣ ಹಾಗೂ ಪದ್ಮ ವಿಭೂಷಣ ಪ್ರಶಸ್ತಿಗಳನ್ನು ಪಡೆದಿದ್ದರು. ಭಾರತ ರತ್ನ ಪ್ರಶಸ್ತಿ ಪಡೆಯದಿದ್ದರೂ ನಿಜವಾದ ಭಾರತ ರತ್ನವೇ ಆಗಿದ್ದರು. ಡಾ ಬಾಲ ಮುರಳಿ ಕೃಷ್ಣ ಅವರ ಸಿರಿ ಕಂಠದಲ್ಲಿ ತ್ಯಾಗರಾಜರು, ಭದ್ರಾಚಲ ರಾಮದಾಸರು ಹಾಗೂ ಅನ್ನಮಯ್ಯ ಅವರ ಸುಶ್ರಾವ್ಯ ಕೀರ್ತನೆಗಳನ್ನು ಕೇಳುವಾಗ ಎಲ್ಲಾ ವಯೋಮಾನದ ಶ್ರೋತೃಗಳೂ ಮೈ-ಮರೆಯುತ್ತಿದ್ದರು. ಗಾನ ಗಂಧರ್ವ ಡಾ ಬಾಲ ಮುರಳಿ ಕೃಷ್ಣ ಅವರನ್ನು ಬಣ್ಣಿಸಲು ಪುಟ-ಪುಟಗಳು ಮಾತ್ರವಲ್ಲ, ಸಂಪುಟಗಳೂ ಸಾಲದಾಗುತ್ತದೆ. ಮೇರು ಸಾಧನೆಯ ಇಂತಹ ಮಹಾಮಹಿಮನ ನಿಧನದಿಂದ ಇಡೀ ಸಂಗೀತ ಜಗತ್ತೇ ಮೌನಕ್ಕೆ ಶರಣಾಗಿದೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

*******

ಡಿ ಪಿ ಎಂ